


# ಸಹಾನುಭೂತಿ

■ ಅರವಿಂದ ಜಿ.ಜೋಷಿ, ಮೈಸೂರು

ಅದೊಂದು ದಟ್ಟ ಅಡವಿ. ಅದರ ಮಧ್ಯದಲ್ಲಿ ಅತ್ತ ದೊಡ್ಡದೂ ಅಲ್ಲದ ಇತ್ತ ಚಿಕ್ಕದೂ ಅಲ್ಲದ ಒಂದು ಹೊಂಡ ಇತ್ತು. ಮಳೆ ಸಾಕಷ್ಟು ಸುರಿದ ಕಾರಣ ಅದು ತುಂಬಿತ್ತು. ಹೊಂಡದ ಸುತ್ತ, ಹುಲ್ಲು, ಗಿಡ, ಗಂಟಿಗಳು ಹುಲುಸಾಗಿ ಬೆಳೆದು ನಿಂತಿದ್ದವು.ಆ ಅಡವಿಯೊಳಗೆ ಮನುಷ್ಯರ ಓಡಾಟ ಇಲ್ಲದ ಕಾರಣ ವಿಧ ವಿಧ ಕಪ್ಪೆ, ಹಾವು, ಮೊಸಳೆಗಳಲ್ಲದೇ ಇತರೆ ಪ್ರಾಣಿ ಪಕ್ಷಿಗಳೂ ಹಾಯಾಗಿ ಓಡಾಡಿಕೊಂಡಿದ್ದವು. ಹೊಂಡದ ಆಸುಪಾಸಿನ ಬಂಡೆಯ ಸಂದುಗೊಂದುಗಳಲ್ಲಿ ವಾಸಿಸುತ್ತಿದ್ದ ಕಪ್ಪೆಗಳು ಸಾಮೂಹಿಕವಾಗಿ ವಟರ್–ವಟರ್ ಎಂದು ವಟಗುಡಲು ಆರಂಭಿಸಿದಾಗ, ಅವುಗಳ ರಾಗಕ್ಕೆ ಜೊತೆ ಜೀರುಂಡೆ, ಸಣ್ಣ ಪುಟ್ಟ ಹಕ್ಕಿಗಳೂ ಕೂಗಾಡಲು ಮುಂದಾಗುತ್ತಿದ್ದವು.

ಹೀಗಿರಲು, ಒಂದು ದಿನ ಅವೆಲ್ಲವೂ ತಮ್ಮದೇ ಲೋಕದಲ್ಲಿ ಮುಳುಗಿದ್ದಾಗ, ಇದ್ದಕ್ಕಿದ್ದಂತೆ 'ಧೊಪ್ಪ' ಎಂದು ಭಾರೀ ಗಾತ್ರದ ವಸ್ತು ಹೊಂಡದಲ್ಲಿ ಬಿದ್ದಂತಾಯಿತು. ಅದರ ಭಯಂಕ ಶಬ್ದ ಆಲಿಸಿದ್ದೇ ತಡ, ಹೊಂಡದ ಸುತ್ತ ಆಡಿಕೊಂಡಿದ್ದ ಕಪ್ಪೆ, ಮೊಸಳೆ ಮತ್ತಿತರೆ ಪ್ರಾಣಿ ಪಕ್ಷಿಗಳು ಬೆಚ್ಚಿ ಬಿದ್ದು, ಪ್ರಾಣ ಭಯದಿಂದ ಅಷ್ಟು ದೂರ ಓಡಿ ಮರೆಯಲ್ಲಿ ಅವಿತು ನಿಂತವು. ಸ್ವಲ್ಪ ಸಮಯದ ಬಳಿಕ ಕಪ್ಪೆಗಳ ಗುಂಪಿನ ಪೈಕಿ ಒಂದು ಹಿರಿಯ ಕಪ್ಪೆ, ಧೈರ್ಯ ತಾಳಿ ಕುಪ್ಪಳಿಸುತ್ತ ಆ ಹೊಂಡದ ಬಳಿ ಬಂದಿತು.ಆಗ ಅದರ ಕಣ್ಣಿಗೆ, ಪುಟ್ಟ ಆನೆಮರಿಯೊಂದು ಹೊಂಡದಲ್ಲಿ ಬಿದ್ದು ಮೇಲಕ್ಕೆದ್ದು ಬರಲು ಕೊಸರಾಡುತ್ತಿರುವುದು ಕಂಡಿತು. ಅಯ್ಯೋ... ಪಾಪ, ಪುಟ್ಟ ಮರಿ ಎಷ್ಟೊಂದು ಸಂಕಟ ಪಡುತ್ತಿದೆಯಲ್ಲ, ಎಂದು ಮನದಲ್ಲಿ ನೊಂದು, ಹೇಗಾದರೂ ಸರಿ ಅದನ್ನು ಕಾಪಾಡಬೇಕೆಂದು ಕೊಂಡಿತು. ಮರು ಕ್ಷಣ ತಾನು ಕುಳಿತ ಸ್ಥಳದಿಂದಲೇ ತನ್ನ ಎಲ್ಲ ಬಳಗದವರನ್ನು ಕೂಗಿ ಕರೆಯಿತು. ಹಿರಿಯ ಕಪ್ಪೆಯ ಕೂಗು ಕೇಳಿ ಎಲ್ಲ ಕಪ್ಪೆಗಳು, ಅದರ ಹಿಂದೆ ಹತ್ತಾರು ಮೊಸಳೆಗಳು ಹಾಗೂ ಪುಟ್ಟ ಪ್ರಾಣಿಗಳು ಹಿಂಡು ಹಿಂಡಾಗಿ ಬಂದು